**All India Radio: Bangalore**
**National Bulletin In Kannada**
**20.03.2025  13.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**20.03.2025  13.10 p.m.**

**<><><><>**

ಮುಖ್ಯಾಂಶಗಳು

1. ದಕ್ಷಿಣ ರಾಜ್ಯಗಳ ಹಿತಾಸಕ್ತಿ ಕಾಪಾಡಲು ಕೇಂದ್ರ ಬದ್ಧ - ಸಚಿವ ಪ್ರಲ್ಹಾದ್ ಜೋಶಿ
2. ಉದ್ದೇಶಿತ ಕ್ಷೇತ್ರಗಳ ಮರುವಿಂಗಡನೆ ವಿಷಯ ಪ್ರಸ್ತಾಪಿಸಿ ಪ್ರತಿಪಕ್ಷಗಳ ಗದ್ದಲ ; ಸಂಸತ್ತಿನ ಉಭಯ ಸದನಗಳ ಕಲಾಪ ಮುಂದೂಡಿಕೆ
3. ಛತ್ತೀಸ್‌ಗಢದಲ್ಲಿ ಭದ್ರತಾ ಪಡೆಗಳ ಗುಂಡಿನ ಚಕಮಕಿ ; ಇಬ್ಬರು ನಕ್ಸಲರು ಹತ
4. ಐಸಿಸಿ ಕ್ರಿಕೆಟ್ ಚಾಂಪಿಯನ್ಸ್ ಟ್ರೋಫಿ ಗೆದ್ದ ಭಾರತ ತಂಡಕ್ಕೆ ೫೮ ಕೋಟಿ ನಗದು ಬಹುಮಾನ ಘೋಷಿಸಿದ ಬಿಸಿಸಿಐ

<><><><>

ತಮಿಳುನಾಡಿನಲ್ಲಿ ತನ್ನ ಆಡಳಿತ ವೈಫಲ್ಯವನ್ನು ಮರೆಮಾಚಿಕೊಳ್ಳಲು ಡಿಎಂಕೆ ಸಂಸತ್ತಿನಲ್ಲಿ ಉದ್ದೇಶಿತ ಲೋಕಸಭಾ ಕ್ಷೇತ್ರಗಳ ವಿಂಗಡನೆಯ ವಿಷಯವನ್ನು ಪ್ರಸ್ತಾಪಿಸುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪಿಸಿದ್ದಾರೆ. ಸಂಸತ್ತಿನ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಲ್ಹಾದ್ ಜೋಶಿ, ಕೇಂದ್ರ ಸರ್ಕಾರ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಜನಗಣತಿಯ ನಂತರ ಕ್ಷೇತ್ರಗಳ ವಿಂಗಡನೆಯ ಪ್ರಕ್ರಿಯೆ ನಡೆಯಲಿದೆ ಎಂದು ಅವರು ಹೇಳಿದರು.

ಧ್ವನಿ : ಪ್ರಲ್ಹಾದ್ ಜೋಶಿ

ಈ ನಡುವೆ ಕ್ಷೇತ್ರ ವಿಂಗಡನೆ ವಿಷಯ ಕುರಿತಂತೆ ಡಿಎಂಕೆ ಸಂಸದರು ಸಂಸತ್ತಿನ ಆವರಣದೊಳಗೆ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಪಕ್ಷದ ಸಂಸದೆ ಕನ್ನಿಮೊಳಿ, ಪಕ್ಷವು ನ್ಯಾಯಯುತ ಕ್ಷೇತ್ರ ಪುನರ್‌ವಿಂಗಡನೆಗೆ ಒತ್ತಾಯಿಸುತ್ತಿದೆ ಎಂದು ಹೇಳಿದರು. ಉದ್ದೇಶಿತ ಕ್ಷೇತ್ರ ಪುನರ್‌ವಿಂಗಡನೆಯು ತಮಿಳುನಾಡು ಸೇರಿದಂತೆ ದಕ್ಷಿಣ ರಾಜ್ಯಗಳ

ಹಿತಾಸಕ್ತಿಯನ್ನು ಹಾಳು ಮಾಡುತ್ತದೆ ಎಂದು ಡಿಎಂಕೆ ಈ ವಿಷಯದ ಕುರಿತು ಕೇಂದ್ರ ಸರ್ಕಾರದಿಂದ ಸ್ಪಷ್ಟೀಕರಣವನ್ನು ಬಯಸುತ್ತದೆ ಎಂದು ಅವರು ಹೇಳಿದರು.

ಧ್ವನಿ: ಕನ್ನಿಮೊಳಿ

<><><>

ಸಂಸತ್ತಿನ ಉಭಯ ಸದನಗಳನ್ನು ಅಪರಾಹ್ನ ೧೨ ಗಂಟೆವರೆಗೆ ಮುಂದೂಡಲಾಯಿತು. ಲೋಕಸಭೆ ಹಾಗೂ ವಿಧಾನಸಭಾ ಕ್ಷೇತ್ರಗಳ ಉದ್ದೇಶಿತ ಮರುವಿಂಗಡನೆಯನ್ನು ವಿರೋಧಿಸಿ, ಡಿಎಂಕೆ ಸದಸ್ಯರು ಧರಿಸಿದ್ದ ಉಡುಪಿಗೆ ಸ್ಪೀಕರ್ ಓಂ ಬಿರ್ಲಾ ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಲೋಕಸಭೆಯನ್ನು ಮುಂದೂಡಲಾಯಿತು. ಲೋಕಸಭೆ ಸಮಾವೇಶಗೊಳ್ಳುತ್ತಿದ್ದಂತೆ, ಸ್ಪೀಕರ್ ಓಂಬಿರ್ಲಾ ಸದನವು ನಿಯಮಗಳ ಪ್ರಕಾರ ನಡೆಯುತ್ತದೆ ಎಂದು ಒತ್ತಿ ಹೇಳಿದರು. ಕೆಲವು ಸದಸ್ಯರು ಸದನದ ನಿಯಮಗಳು ಹಾಗೂ ಘನತೆಯನ್ನು ಹಾಳು ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಿಯಮಗಳ ಉಲ್ಲಂಘನೆಗೆ ತಾವು ಅವಕಾಶ ನೀಡುವುದಿಲ್ಲ. ವಿರೋಧ ಪಕ್ಷದ ಸದಸ್ಯರು ಘೋಷಣೆಗಳನ್ನು ಹೊಂದಿರುವ ಟಿ-ಶರ್ಟ್‌ಗಳನ್ನು ಧರಿಸದಂತೆ ಸೂಚಿಸಿದರು. ಅಂತಹ ಸದಸ್ಯರು ಸದನದಿಂದ ಹೊರ ಹೋಗುವಂತೆ  ಸೂಚಿಸಿದರು. ಆದರೆ ಡಿಎಂಕೆ ಮತ್ತು ಇತರ ಪ್ರತಿಪಕ್ಷಗಳ ಸದಸ್ಯರು ಗದ್ದಲದ ಸನ್ನಿವೇಶ ಸೃಷ್ಟಿಸಿದರು. ನಂತರ ಸ್ಪೀಕರ್ ಕಲಾಪವನ್ನು ಅಪರಾಹ್ನ ೧೨ ಗಂಟೆಗೆ ಮುಂದೂಡಿದರು. ರಾಜ್ಯಸಭೆ ಕಲಾಪವನ್ನು ೧೨ ಗಂಟೆಗೆ ಮುಂದೂಡಲಾಯಿತು. ಸಭಾಪತಿ ಜಗದೀಪ್ ಧನ್‌ಕರ್ ವಿವಿಧ ರಾಜಕೀಯ ಪಕ್ಷಗಳ ಸದನ ನಾಯಕರೊಂದಿಗೆ ತಾವು ಸಭೆ ನಡೆಸುವುದಾಗಿ ಘೋಷಿಸಿದರು.

<><><>

ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಇಂದು ಭದ್ರತಾಪಡೆಗಳು ನಡೆಸಿದ ಗುಂಡಿನ ಚಕಮಕಿಯಲ್ಲಿ ಇಬ್ಬರೂ ಮಾವೋವಾದಿಗಳು ಸಾವನ್ನಪ್ಪಿದ್ದಾರೆ. ಗುಂಡಿನ ಚಕಮಕಿ ಘಟನೆಯಲ್ಲಿ ಜಿಲ್ಲಾ ಮೀಸಲು ಪೊಲೀಸ್ ಗುಂಪಿನ ಒಬ್ಬ ಯೋಧ ಹುತಾತ್ಮರಾಗಿದ್ದಾರೆ. ಲಭ್ಯವಾಗಿರುವ ಮಾಹಿತಿಗಳ ಪ್ರಕಾರ, ಭದ್ರತಾಪಡೆಗಳ ಜಂಟಿ ತಂಡ ಬಿಜಾಪುರ ಹಾಗೂ ದಾಂತೆವಾಡ ಜಿಲ್ಲೆಗಳ ಗಡಿಯಲ್ಲಿರುವ ಅರಣ್ಯ ಪ್ರದೇಶದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗೆ ತೆರಳಿತ್ತು. ಈ ಸಂದರ್ಭದಲ್ಲಿ ಭದ್ರತಾ ಪಡೆಗಳು ಹಾಗೂ ಮಾವೋವಾದಿಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲರು ಹತರಾಗಿದ್ದಾರೆ. ಹತರಾದ ಇಬ್ಬರೂ ನಕ್ಸಲರ ಮೃತದೇಹಗಳನ್ನು, ಭಾರೀ ಪ್ರಮಾಣದ

ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರದೇಶದಲ್ಲಿ ಭದ್ರತಾಪಡೆಗಳು ಶೋಧನಾ ಕಾರ್ಯಾಚರಣೆಯನ್ನು ಇನ್ನು ಮುಂದುವರೆಸಿವೆ.

<><><>

ಪಾರ್ಸಿ ಹೊಸವರ್ಷ - ನವ್‌ರೋಜ್ ಅನ್ನು ಇಂದು ಆಚರಿಸಲಾಗುತ್ತಿದೆ. ಶಾಂತಿ ಹಾಗೂ ನೆಮ್ಮದಿಯ ಮುನ್ನುಡಿಯಂತೆ ಪರಿಗಣಿಸುವ ಈ ಹಬ್ಬವನ್ನು ಪಾರ್ಸಿ ಸಮುದಾಯ ವ್ಯಾಪಕವಾಗಿ ಆಚರಿಸುತ್ತದೆ. ಈ ಆಚರಣೆಯ ಜೊತೆಗೆ ನವ್‌ರೋಜ್ ಪಶ್ಚಾತಾಪದ ದಿನವೂ ಆಗಿದೆ. ಮನಸ್ಸನ್ನು ಶುದ್ಧೀಕರಿಸಲು, ಪ್ರೀತಿ ಹಾಗೂ ಶಾಂತಿಯಿಂದ ಹೊಸವರ್ಷವನ್ನು ಪ್ರಾರಂಭಿಸಲು ಈ ದಿನವನ್ನು ಮೀಸಲಿಡಲಾಗುತ್ತದೆ. ಹಬ್ಬದ ಅಂಗವಾಗಿ ಪಾರ್ಸಿಗಳು ಸಾಂಪ್ರದಾಯಿಕ ವಸ್ತ್ರಗಳನ್ನು ಧರಿಸುತ್ತಾರೆ. ಅಗ್ನಿ ದೇವಾಲಯಕ್ಕೆ ಭೇಟಿ ನೀಡಿ, ಪವಿತ್ರ ಅಗ್ನಿಗೆ ಹಾಲು, ಹೂವು, ಹಣ್ಣು, ಶ್ರೀಗಂಧವನ್ನು ಸಮರ್ಪಿಸುತ್ತಾರೆ. ಪಾರ್ಸಿ ಸಮುದಾಯದ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಮುಂಬೈ ಹಾಗೂ ಉಪನಗರಗಳಲ್ಲಿ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ವೈವಿಧ್ಯಮಯವಾದ ಪಾರ್ಸಿ ಪಾಕಪದ್ಧತಿಯೊಂದಿಗೆ ಭವ್ಯ ಭೋಜನದೊಂದಿಗೆ ಆಚರಿಸಲಾಗುತ್ತದೆ. ಪರಸ್ಪರ ಒಗ್ಗೂಡಲು ಹಾಗೂ ಬೆರೆಯಲು ಇದು ಉತ್ತಮ ಸಂದರ್ಭವೆಂದು ಪಾರ್ಸಿಗಳು ಪರಿಗಣಿಸುತ್ತಾರೆ. ಪಾರ್ಸಿ ಹೊಸವರ್ಷ - ನವ್‌ರೋಜ್ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು, ಜನತೆಗೆ ಶುಭ ಕೋರಿದ್ದಾರೆ. ಈ ವಿಶೇಷ ದಿನ ಎಲ್ಲರಿಗೂ ಸಂತೋಷ, ಸಮೃದ್ಧಿ ಹಾಗೂ ಉತ್ತಮ ಆರೋಗ್ಯ ತರಲಿ ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹಾರೈಸಿದ್ದಾರೆ. ಮುಂಬರುವ ಪಾರ್ಸಿ ಹೊಸ ವರ್ಷವು ಯಶಸ್ಸು ಹಾಗೂ ಪ್ರಗತಿಯಿಂದ ಗುರುತಿಸಲ್ಪಡಲಿ, ಸಾಮರಸ್ಯದ ಬಂಧಗಳು ಬಲಗೊಳ್ಳಲಿ ಎಂದು ಅವರು ಶುಭ ಕೋರಿದ್ದಾರೆ.

<><><>

ರಾಷ್ಟ್ರಪತಿ ಭವನದ ಅಮೃತ್ ಉದ್ಯಾನವನದಲ್ಲಿ ಇಂದು ನಡೆಯಲಿರುವ ಉದ್ಯಮ ಉತ್ಸವದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಲಿದ್ದಾರೆ. ದೇಶದ ವೈವಿಧ್ಯಮಯ ಪರಂಪರೆಯನ್ನು ಸಾರ್ವಜನಿಕರಿಗೆ ತಲುಪಿಸುವ ಮತ್ತು ತಲುಪಿಸುವ ಮೂಲಕ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಬಲೀಕರಣ ಮತ್ತು ಪ್ರೋತ್ಸಾಹಕ್ಕೆ ಕೇಂದ್ರ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ ಆಯೋಜಿಸುತ್ತಿರುವ ಈ ಕಾರ್ಯಕ್ರಮ ಇದೇ ೩೦ರವರೆಗೆ ನಡೆಯಲಿದೆ. ಕರಕುಶಲ ವಸ್ತುಗಳು, ಕೃಷಿ ಆಧಾರಿತ ಉತ್ಪನ್ನಗಳು ಸೇರಿದಂತೆ ವೈವಿಧ್ಯಮಯ

ಉತ್ಪನ್ನಗಳನ್ನು ಈ ಮೇಳದಲ್ಲಿ ಪ್ರದರ್ಶನಕ್ಕೆ ಇಡಲಾಗುತ್ತಿದೆ. ಕಾರ್ಯಕ್ರಮದ ಭಾಗವಾಗಿ ಹುನರ್ ಸಂಗೀತ್, ನುಕ್ಕಡ್ ನಾಟಕ್, ರಾಜಸ್ಥಾನಿ ಬೊಂಬೆ ನಿರ್ಮಾಣದ ಪ್ರದರ್ಶನಗಳು ನಡೆಯಲಿವೆ.

<><><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ನವದೆಹಲಿಯಲ್ಲಿಂದು ನಡೆದ ೧೦ನೇ ಸಿಐಐ ಇಂಡಿಯಾ - ಎಲ್‌ಎಸಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಜಾಗತಿಕ, ಆರ್ಥಿಕ ಸನ್ನಿವೇಶಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದ ಡಾ. ಜೈಶಂಕರ್ ಜಗತ್ತು ಅನಿಶ್ಚಿತ ಹಾಗೂ ಅಸ್ಥಿರತೆಯ ಕಾಲದ ಮೂಲಕ ಹಾದುಹೋಗುತ್ತಿದೆ. ಹಿಂದಿನ ಅವಧಿಯ ಒತ್ತಡಗಳು ಹಾಗೂ ಭವಿಷ್ಯದ ಸವಾಲುಗಳು ಪ್ರಮುಖ ಸಂಭಾವ್ಯ ಅಂಶಗಳಾಗಿವೆ ಎಂದು ಅವರು ವಿಶ್ಲೇಷಿಸಿದರು. ಕೋವಿಡ್-೧೯ ಸಾಂಕ್ರಾಮಿಕ ರೋಗ ಹಾಗೂ ಅದರ ದೀರ್ಘಕಾಲಿಕ ಪರಿಣಾಮಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಪರಿಣಾಮ ಬೀರಿವೆ. ಇದು ಸುಸ್ಥಿರ ಅಭಿವೃದ್ಧಿ ಗುರಿಗಳ ಮೇಲೂ ಪರಿಣಾಮ ಉಂಟು ಮಾಡಿವೆ ಎಂದು ಅವರು ಒತ್ತಿ ಹೇಳಿದರು. ಉಕ್ರೇನ್ ಸಂಘರ್ಷ ಆಹಾರ, ಇಂಧನ ಹಾಗೂ ರಸಗೊಬ್ಬರ ಭದ್ರತೆಯ ಮೇಲೆ ಹೆಚ್ಚುವರಿ ಒತ್ತಡದ ಅಂಶವಾಗಿವೆ ಎಂಬುದನ್ನು ಅವರು ಪ್ರಸ್ತಾಪಿಸಿದರು.

<><><>

ದೇಶದಲ್ಲಿ ಅಲ್ಪ ಸಂಖ್ಯಾತ ಸಮುದಾಯಗಳು ಸೇರಿದಂತೆ ಎಲ್ಲ ಸಮುದಾಯಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಸುಧಾರಿಸಲು ಸರ್ಕಾರ ಶ್ರಮಿಸುತ್ತಿದೆ ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಲೋಕಸಭೆಗೆ ತಿಳಿಸಿದ್ದಾರೆ. ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಸಚಿವ ರಿಜಿಜು, ಈ ಸಮುದಾಯಗಳ ಶೈಕ್ಷಣಿಕ ಸಬಲೀಕರಣಕ್ಕಾಗಿ ಸರ್ಕಾರ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ಹಾಗೂ ಮೆರಿಟ್ ಆಧಾರಿತ ವಿಧ್ಯಾರ್ಥಿ ವೇತನ ಯೋಜನೆಗಳನ್ನು ಜಾರಿಗೊಳಿಸುತ್ತಿದೆ ಎಂದು ವಿವರಿಸಿದ್ದಾರೆ. ರಿಯಾಯಿತಿ ಸಾಲಗಳನ್ನು ಒದಗಿಸಲು ಪ್ರಧಾನಮಂತ್ರಿ ವಿರಾಸತ್ ಕಾ ಸಮವರ್ಧನ್ - ಪಿಎಂ ವಿಕಾಸ್ ಮತ್ತು ರಾಷ್ಟ್ರೀಯ ಅಲ್ಪ ಸಂಖ್ಯಾತರ ಅಭಿವೃದ್ಧಿ ಹಾಗೂ ಹಣಕಾಸು ನಿಗಮ - ಎನ್‌ಎಂಡಿಎಫ್‌ಸಿ ಮೂಲಕ ಉದ್ಯೋಗ ಮತ್ತು ಆರ್ಥಿಕ ಸಬಲೀಕರಣ ಖಾತರಿಪಡಿಸಲು ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ ಎಂದು ವಿವರಿಸಿದ್ದಾರೆ.

<><><>

ಐಸಿಸಿ ಕ್ರಿಕೆಟ್ ಚಾಂಪಿಯನ್ಸ್ ಟ್ರೋಫಿ ಗೆದ್ದ ಭಾರತ ತಂಡಕ್ಕೆ ಬಿಸಿಸಿಐ ೫೮ ಕೋಟಿ ರೂಪಾಯಿ ನಗದು ಬಹುಮಾನ ಘೋಷಿಸಿದೆ. ದುಬೈನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ರೋಹಿತ್ ಶರ್ಮ ಪಡೆ, ನ್ಯೂಜಿಲೆಂಡ್ ತಂಡವನ್ನು ೪ ವಿಕೆಟ್‌ಗಳಿಂದ ಸೋಲಿಸಿ ಚಾಂಪಿಯನ್ಸ್ ಟ್ರೋಫಿ ಮುಡಿಗೇರಿಸಿಕೊಂಡಿತ್ತು. ಘೋಷಿಸಲಾದ ನಗದು ಬಹುಮಾನದಲ್ಲಿ ಆಟಗಾರರು, ತರಬೇತಿ ಹಾಗೂ ಬೆಂಬಲ ಸಿಬ್ಬಂದಿ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿ ಸದಸ್ಯರಿಗೆ ಬಹುಮಾನದಲ್ಲಿ ಪಾಲಿರಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>